ಪ್ರಶ್ನೆಗಳು ಬದಲಾಗಿ ಬರುತ್ತಿವೆ. ಕೆಲವನ್ನು ಡಿಲೀಟ್ ಮಾಡಂತ್ತಾರೆ. ಇಂಥ ಸಮಸ್ಯೆಯಾಗಿದೆ. ಅಲ್ಲಿ ಪ್ರಿಮೆಟ್ರಿಕ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಇದೆ. ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹಾಸ್ಟೆಲು ಇಲ್ಲ. ಈ ವರ್ಷವಾದರೂ ಅದಕ್ಕೆ ಒಪ್ಪಿಗೆ ಕೊಡಬೇಕು. ಪ್ರತಿ ವರ್ಷ ಕೇಳುತ್ತಾ ಹೋದರೆ ತಮಗೆ ಭೂಷಣವಲ್ಲ.

ಶ್ರೀ ಜಿ. ಬಸವಣ್ಣಪ್ಪ.——ಪ್ರಶ್ನೆಯಲ್ಲಿ ಕಾಲೇಜು ವಿದ್ಯಾರ್ಥಿ ನಿಲಯಂ ಇಲ್ಲವೆಂದು ಇಲ್ಲ. ಸರ್ಕಾರೀ ವಿದ್ಯಾರ್ಥಿ ನಿಲಯ ಇಲ್ಲವೆಂದು ಇರುವುದರಿಂದ ಅದಕ್ಕೆ ಉತ್ತರಿಸಲಾಗಿದೆ. ಕಾಲೇಜು ವಿದ್ಯಾರ್ಥಿ ನಿಲಯದ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯ ಸೋಮನ ಕೊಪ್ಪ ಗ್ರಾಮದಲ್ಲಿ ಕಲ್ಯಾಣ ಮಂಟಪದ ನಿರ್ಮಾಣ

೧೩೪೬. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).——ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಸೋಮನ ಕೊಪ್ಪ ಗ್ರಾಮಕ್ಕೆ ಕಲ್ಯಾಣ ಮಂಟಪ ಕಟ್ಟಲು ಮಜರಾಯಿ ಇಲಾಖೆಯಿಂದ ಹಣ ಮಂಜೂರು ಮಾಡಲಾಗಿರುವುದು ನಿಜವಲ್ಲವೆ ? ಹಾಗಿದ್ದಲ್ಲಿ, ಎಷ್ಟು ಹಣ ಮಂಜೂರು ಮಾಡಲಾಗಿದೆ ಮತ್ತು ಯಾವಾಗ ಮಂಜೂರು ಮಾಡಲಾಗಿದೆ ?

ಆ) ಸದರಿ ಕಟ್ಟಡವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸದರಿ ಕಟ್ಟಡವನ್ನು ನಿರ್ಮಿಸುತ್ತಿರುವವರು ಯಾರು ಮತ್ತು ಅವರು ಸರ್ಕಾರದ ಪರವಾನಿಗೆ ಹೊಂದಿರುವರೇ ?

ಈ) ಸದರಿ ಕಟ್ಟಡಕ್ಕೆ ಮಂಜೂರಾದ ಹಣವು ಪೋಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದವರ ಮೇಲೆ ಸರ್ಕಾರದವರು ಕ್ರಮಕ್ಕೈಗೊಳ್ಳುವರೇ ?

ಊ) ಸದರಿ ಕಟ್ಟಡವನ್ನು ಯಾವಾಗ ಪೂರ್ಣ ಗೊಳಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಬಿಜಾಪುರ ಜಿಲ್ಲೆಯ ಪೂರ್ಣಾನಂದ ಮಠದ ವತಿಯಿಂದ ಕಲ್ಯಾಣ ಮಂಟಪ ಕಟ್ಟಲು ಮಜರಾಯಿ ಇಲಾಖೆಯಿಂದ ೫೦,೦೦೦–೦೦ ರೂಪಾಯಿಗಳನ್ನು ಮಂಜೂರು ಮಾಡಿರುವುದು ನಿಜ ಈ ಅನುದಾನವನ್ನು ದಿನಾಂಕ. ೨೫-೩–೧೯೮೨ ರಂದು ಮಂಜೂರು ಮಾಡಲಾಗಿದೆ.

ಆ) ಹೌದು.

ಇ) ಸದರಿ ಮಠದ ಮಠಾಧಿಪತಿಯಾದ ಶ್ರೀ ಶ್ರದ್ಧಾನಂದ ಸ್ವಾಮಿಗಳು ಈ ಕಲ್ಯಾಣ ಮಂಟಪ ಕಟ್ಟಿಸುತ್ತಿದ್ದಾರೆ. ಸ್ವಾಮಿಗಳು ಈ ಮಠದ ಒಬ್ಬರೇ ಟ್ರಸ್ಟಿಗಳಾಗಿದ್ದು, ಈ ಕಟ್ಟಡ ಕಟ್ಟಿಸಲು ಅಧಿಕಾರ ಹೊಂದಿರುತ್ತಾರೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಮಠಾಧಿಪತಿಗಳು ಕಟ್ಟಡ ಪೂರ್ಣ ಮಾಡಲು ಬೇಕಾಗಿರುವ ಬಾಕಿ ಹಣವನ್ನು ಶೇಖರಣೆ ಆದಾಗ ಪೂರ್ಣ ಮಾಡುವರು.

ಶ್ರೀ ಜೆ.ಎಂ. ಕಾವಡೆ.–ಕಟ್ಟಡ ಕಟ್ಟಿರುವ ನೆಪದಲ್ಲಿ ಯಾರ್ಯಾರು ಏನೇನು ಮಾಡಿದರೋ ಗೊತ್ತಿಲ್ಲ. ಒಟ್ಟಿನಲ್ಲಿ ಸ್ವಾಮೀಜಿಯಂನ್ನು ಊರಂ ಬಿಡಿಸಿದ್ದಾರೆ. ರಾವಣ್ಣ ಬೆಲ್ಲದ್, ಊದಿನಕಡ್ಡಿ. (ನಿವೃತ್ತ ಶಿಕ್ಷಕ). ಚಂದ್ರುಪ್ಪ ಮತ್ತು ಹನುಮೇಗೌಡ ಎಂಬುವವರು ಕಂಟ್ರಾಕ್ಟ್ ಮಾಡಿ ಕೆಲಸ ಮಾಡುತ್ತಿದ್ದಾರೆ. ೫೦ ಸಾವಿರ ರೂಪಾಯಿ ಕೊಟ್ಟಿದ್ದಕ್ಕೆ ಕೇಳುವವರು ಇಲ್ಲ. ಪ್ರತಿಯೊಂದು ಮನೆಯಿಂದ ೫೦೦–೧೦೦೦

ರೂಪಾಯಿ ವಸೂಲ್ಮಾಡುತ್ತಿದ್ದಾರೆ. ಇದನ್ನು ತೆಗೆದುಕೊಂಡು ಕ್ಲಬ್‌ನಲ್ಲಿ ಮಜಾ ಮಾಡುತ್ತಿದ್ದಾರೆ. ಆಡಿಟ್ ರಿಪೋರ್ಟ್ ತರಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ವಿವರಗಳನ್ನು ಕೊಡಲಿ ನಾನು ಅದನ್ನು ವಿಚಾರ ಮಾಡಿಸುತ್ತೇನೆ.

MR. SPEAKER.—Thank you.

ಪ್ರಶ್ನೆ ಸಂಖ್ಯೆ ೩೯೭ (೯೨೨) ಸದಸ್ಯರು ಗೈರು ಹಾಜರಿ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಹೋದ ವಾರವೂ ಅವರು ಇದೇ ಪ್ರಶ್ನೆ ಕೇಳಿ ಗೈರು ಹಾಜರಾಗಿದ್ದರು. ಇವತ್ತೂ ಗೈರು ಹಾಜರಾಗಿದ್ದಾರೆ. ಈರೀತಿ ಮಾಡಿದರೆ ಹೇಗೆ ?

ಮಹಿಳಾ ಹಂರಿಹಗ್ಗ ತರಬೇತಿ ಕೇಂದ್ರದ ಬಗ್ಗೆ.

೬೬೧. (ಉ)ಶ್ರೀ ಕೆ. ಕುಶಾಲ (ಸಂಳ್ಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮಹಿಳಾ ಹಂರಿಹಗ್ಗ ತರಬೇತಿ ಕೇಂದ್ರವು ಕಳೆದ ೨೫ ವರ್ಷಗಳಿಂದ ಒಂದೇ ಕಡೆಯಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೨೫ ವರ್ಷಗಳಿಂದ ಒಂದೆಡೆಯಲ್ಲಿ ಈ ತರಬೇತಿ ನಡೆಯುವುದು ಉದ್ದೇಶ ಏನು, ಇದನ್ನು ಇತರೆಡೆಗೆ ಬದಲಾಯಿಸುವ ಯೋಜನೆಯೇನಾದರೂ ಇದೆಯೇ ?

ಇ) ಸುಳ್ಯ ತಾಲ್ಲೂಕಿನಲ್ಲಿ ತೆಂಗಿನ ಬೆಳೆ ಬಹಳಷ್ಟು ಇದ್ದು ಹಿಂದುಳಿದ, ಪರಿಶಿಷ್ಟ ಜಾತಿ ಜನಾಂಗದ ಜನರು ಸಿಲೋನ್ ರಬ್ಬರು ಕೃಷಿ ಕಾರ್ಮಿಕರಲ್ಲಿ ಕೆಲಸವಿಲ್ಲದ ಮಂಹಿಳೆಯಂವರು ಬಹಳಷ್ಟು ಇರುವುದರಿಂದ ಸದರಿ ತರಬೇತಿ ಕೇಂದ್ರವನ್ನು ಸುಳ್ಯಕ್ಕೆ ವರ್ಗಾಯಿಸಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೨೧ ವರ್ಷಗಳಿಂದ ನಡೆಯುತ್ತಿದೆ.

ಆ) ಈ ಕೇಂದ್ರಕ್ಕೆ ಖಾಯಂ ಆಗಿ ಆಧುನಿಕ ಯಂತ್ರೋಪಕರಣಗಳನ್ನು ಒದಗಿಸಿ ಸರ್ಕಾರಿ ಕಟ್ಟಡವಿರುವುದರಿಂದ ಇತರೆಡೆಗೆ ಬದಲಾಯಿಸುವ ಕಾರಣವಿಲ್ಲ.

ಇ) ಮೇಲಿನ ಕಾರಣಗಳಿಂದ ಕೇಂದ್ರವನ್ನು ವರ್ಗಾಯಿಸಲು ಬರುವುದಿಲ್ಲ.

ಶ್ರೀ ಕೆ. ಕುಶಾಲ.—ಈ ಕೇಂದ್ರವನ್ನು ಏತಕ್ಕೆ ಬದಲಾಯಿಸಬಾರದು ? ಮೇಲ್ವಿಚಾರಕರ ಇಚ್ಛೆಯಂತೆ ಇಷ್ಟಬಂದ ತರಬೇತಿದಾರರನ್ನು ನೇಮಕ ಮಾಡುತ್ತಿದ್ದು ಆ ತರಬೇತಿ ಕೇಂದ್ರದಲ್ಲಿ ಅವ್ಯವಹಾರ ನಡೆದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮೇಲ್ವಿಚಾರಕರನ್ನು ಏತಕ್ಕೆ ವರ್ಗಾವಣೆ ಮಾಡಬಾರದು ? ಕೇಂದ್ರದಿಂದ ಆಗುತ್ತಿರುವ ಲಾಭ ಏನು ? ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಇದರಿಂದ ಪ್ರಯೋಜನವಾಗಿದೆಯೇ ?

ಶ್ರೀ ಜಿ. ಬಸವಣ್ಣಪ್ಪ —ಸನ್ಮಾನ್ಯ ಅಧ್ಯಕ್ಷರೇ, ತೆಂಗಿನ ನಾರು ತರಬೇತಿ ಕೇಂದ್ರ ಮಂಗಳೂರಿನಲ್ಲಿ ೧೯೬೫-೬೬ರಲ್ಲಿ ಪ್ರಾರಂಭವಾಯಿತು. ಇಂಥ ಕೇಂದ್ರಗಳು ನಮ್ಮ ರಾಜ್ಯದಲ್ಲಿ ೬ ಇವೆ. ಅದನ್ನು ಸುಳ್ಳ ತಾಲ್ಲೂಕಿಗೆ ವರ್ಗಾವಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಮಂಗಳೂರು ಜಿಲ್ಲೆಯಲ್ಲಿ ತೆಂಗಿನ ನಾರಿನ ತರಬೇತಿ ಮಾಡತಕ್ಕ ಕೇಂದ್ರವಿರುವುದರಿಂದ, ಒಂದು ತಾಲ್ಲೂಕಿನವರು ಮಾತ್ರವಲ್ಲದೆ ಇಡೀ ಜಿಲ್ಲೆಯ ಎಲ್ಲಾ ಮಕ್ಕಳು ತರಬೇತಿ ಹೊಂದಬಹುದು. ಅಲ್ಲಿ ಶಾಶ್ವತವಾದ ಇನ್‌ಫ್ರಾ ಸ್ಟ್ರಕ್ಚರ್ ಇರುವುದರಿಂದ ಹುರಿಹಗ್ಗ ತರಬೇತಿ ಕೇಂದ್ರವನ್ನು ವರ್ಗಾವಣೆ ಮಾಡುವುದಕ್ಕಾಗುವುದಿಲ್ಲ. ಈ ಕೇಂದ್ರದಲ್ಲಿ ೧೮೫ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದ ಮಂಹಿಳೆಯರು ತರಬೇತಿ ಪಡೆಯುತ್ತಿದ್ದಾರೆ. ಅವರಿಗೆ ತಿಂಗಳಿಗೆ ೧೫೦ ರೂಪಾಯಿ ಕೊಡುತ್ತಿದ್ದೇವೆ.